**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 503/2023**

**ಸಿ.ಡಬ್ಲ್ಯೂಃ 3**
**ಪಿ.ಡಬ್ಲೂಃ 3**

**ಸಾಕ್ಷಿದಾರರ ಹೆಸರು ಃ ಹಸನ್**
**ತಂದೆಯ ಹೆಸರು ಃ ರುದ್ರಪ್ಪ**
**ವಯಸ್ಸು ಃ 42 ವರ್ಷ**
**ಉದ್ಯೋಗ ಃ ಮೀನುಗಾರ**
**ವಾಸಸ್ಥಳ ಃ ರಾವೂರು ಮೀನ್ ಕ್ಯಾಂಪ್**

**ದಿನಾಂಕಃ 30.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ಚಾಸಾ-1 ನನ್ನ ಹೆಂಡತಿ. ಚಾಸಾ-2 ನನ್ನ ಮಗ. ಆರೋಪಿತರು ನಮ್ಮ ಸಂಬಂಧಿಕರು.

ದಿನಾಂಕಃ 03.09.2023 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ನನ್ನ ಹೆಂಡತಿ ಚಾಸಾ-1 ಆರೋಪಿಯ ಮನೆಯ ಪಕ್ಕದಲ್ಲಿರುವ ನನ್ನ ಅಕ್ಕ ಗೌರಮ್ಮನವರ ಮನೆಗೆ ಹೋಗಿ ವಾಪಸ್ಸು ಬರುವಾಗ ನನ್ನ ಹೆಂಡತಿಯನ್ನು ಆರೋಪಿ ಅಡ್ಡಗಟ್ಟಿ ಅಂದೂರು ಬಿಳಾಲುಕೊಪ್ಪದಲ್ಲಿರುವ ನನ್ನ ಒಂದುವರೆ ಎಕರೆ ಒತ್ತುವರಿ ಜಮೀನು ಸಂಪೂರ್ಣವಾಗಿ ನನಗೆ ಕೊಡಬೇಕು ಎಂದು ಗಲಾಟೆ ತೆಗೆದು ನನ್ನ ಹೆಂಡತಿಗೆ ಅವಾಚ್ಯ ಶಬ್ದಗಳಿಂದ ಬೈದು, ನನ್ನ ಹೆಂಡತಿಯ ಕೂದಲನ್ನು ಹಿಡಿದು ಎಳೆದಾಡಿ, ನನ್ನ ಹೆಂಡತಿಯ ಎರಡು ಕೆನ್ನೆಗಳಿಗೆ ಹೊಡೆದಿರುತ್ತಾನೆ. ಮುಂದುವರೆದು ಆರೋಪಿ ನನ್ನ ಹೆಂಡತಿ ಧರಿಸಿದ್ದ ನೈಟಿಯನ್ನು ಹರಿದಿರುತ್ತಾರೆ. ನಾನು ಮತ್ತು ನನ್ನ ಮಗ ಆರೋಪಿತರಿಂದ ನನ್ನ ಹೆಂಡತಿಯನ್ನು ಬಿಡಿಸಲು ಹೋದಾಗ ಆರೋಪಿತರು ನನಗೂ ಮತ್ತು ನನ್ನ ಮಗನಿಗೂ ಸಹ ಹೊಡೆದಿರುತ್ತಾರೆ. ಆರೋಪಿತರು ಅದೇ ಸಮಯದಲ್ಲಿ ಅಲ್ಲಿಯೇ ಇದ್ದ ನನ್ನ ಮಗನ ಚಪ್ಪಲಿಯನ್ನು ತೆಗೆದುಕೊಂಡು ನನ್ನ ಹೆಂಡತಿಯ ಬೆನ್ನಿಗೆ ಮತ್ತು ಕೆನ್ನೆಗೆ ಹೊಡೆದಿರುತ್ತಾನೆ. ಆ ಸಂದರ್ಭದಲ್ಲಿ ಚಾಸಾ-4 ಮತ್ತು 5 ಸ್ಥಳಕ್ಕೆ ಬಂದು ಜಗಳವನ್ನು ಬಿಡಿಸಿರುತ್ತಾರೆ. ಆ ಸಂದರ್ಭದಲ್ಲಿ ಆರೋಪಿತರು ನನಗೆ ಮತ್ತು ನನ್ನ ಹೆಂಡತಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ನನ್ನ ಹೆಂಡತಿಯನ್ನು ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಲು ಕರೆದುಕೊಂಡು ಹೋಗಿರುತ್ತೇನೆ. ನಂತರ ಸಂಜೆ 5.30 ಕ್ಕೆ ಸದರಿ ಹಲ್ಲೆಯಿಂದ ನನ್ನ ಮಗ ಚಾಸಾ-2 ರವರಿಗೆ ಎದೆ ನೋವು ಬಂದಿದ್ದರಿಂದ ನಾನು ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಪೊಲೀಸರು ಆಸ್ಪತ್ರೆಗೆ ಬಂದು ನನ್ನ

ಹೆಂಡತಿಯಿಂದ ಹೇಳಿಕೆ ಮತ್ತು ದೂರನ್ನು ಪಡೆದುಕೊಂಡಿರುತ್ತಾರೆ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನಂತರ ದಿನಾಂಕಃ 03.09.2023 ರಂದು ಪೊಲೀಸರು ಕೃತ್ಯ ನಡೆದ ಸ್ಥಳ ಪಂಚನಾಮೆ ಮಾಡಲು ಚಾಸಾ-6 ಮತ್ತು 7 ರವರೊಂದಿಗೆ ಸ್ಥಳಕ್ಕೆ ಬಂದಿದ್ದರು ಆ ಸಂದರ್ಭದಲ್ಲಿ ನಾನು ತೋರಿಸಿದಂತೆ ಪೊಲೀಸರು ಸಂಜೆ 4.00 ರಿಂದ 5.00 ಗಂಟೆಯವರೆಗೆ ಕೃತ್ಯ ನಡೆದ ಸ್ಥಳದ ಮಹಜರನ್ನು ಸ್ಥಳದಲ್ಲಿಯೇ ದಾಖಲು ಮಾಡಿಕೊಂಡರು. ಅದೇ ಸಂದರ್ಭದಲ್ಲಿ ನಾನು ಅಲ್ಲಿಯೇ ಬಿದ್ದಿದ್ದ ನನ್ನ ಮಗನ ಚಪ್ಪಲಿಯನ್ನು ಪೊಲೀಸರಿಗೆ ನೀಡಿದೆ. ಸದರಿ ಚಪ್ಪಲಿಯನ್ನು ಪೊಲೀಸರು ಸದರಿ ಸಮಯದಲ್ಲಿ ಅಮಾನತುಪಡಿಸಿಕೊಂಡರು. ಸದರಿ ಸಮಯದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದುಕೊಂಡರು.

ಈಗ ಸಾಕ್ಷಿಯು ಸದರಿ ಸ್ಥಳ ಮತ್ತು ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕಿ 3 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ನೈಟಿಯನ್ನು ನೋಡಿ ಕೃತ್ಯ ನಡೆದ ದಿನ ತನ್ನ ಹೆಂಡತಿ ಇದೇ ನೈಟಿಯನ್ನು ಧರಿಸಿರುತ್ತಾರೆಂದು ನೋಡಿ ಗುರುತಿಸಿರುತ್ತಾರೆ. ಸದರಿ ನೈಟಿಯನ್ನು ಈಗಾಗಲೇ ಎಂಓ-1 ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ತನ್ನ ಮಗನ ಚಪ್ಪಲಿಯನ್ನು ನೋಡಿ ಕೃತ್ಯ ನಡೆದ ದಿನ ತನ್ನ ಮಗ ಇದೇ ಚಪ್ಪಲಿಯನ್ನು ಧರಿಸಿರುತ್ತಾನೆ ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ಚಪ್ಪಲಿಯನ್ನು ಈಗಾಗಲೇ ಎಂಓ-2 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಪಿ ಎಸ್ ವಕೀಲರಿಂದಃಃ**

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಓ**

**Sd/-xx**
**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**